ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ: ಕಾಶಿಇ/ಮಾತಂವಿ/ಪಿಯುಆರ್/13/ಇನ್ಫೋ/2020 ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,

Computer No.369295 ದಿನಾಂಕ: 08/04/2021

## ಸುತ್ತೋಲೆ-2

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್ ಪಿ.ಸಿಗಳನ್ನು ಹಂಚಿಕೆ ಮಾಡುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ 171 ಹೆಚ್‌ಪಿಸಿ 2020 ದಿನಾಂಕ: 11/12/2020 ಮತ್ತು 02/3/2021

2. ಈ ಕಛೇರಿಯ ದಿನಾಂಕ:23/03/2021ರ ಸಮಸಂಖ್ಯೆಯ ಸುತ್ತೋಲೆ

>>><<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಥಮ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್ ಪಿ.ಸಿಗಳನ್ನು ಒದಗಿಸುವ ಸಂಬಂಧದಲ್ಲಿ, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳ ಆನ್‌ಲೈನ್ ಪ್ರವೇಶಾತಿ ಪೋರ್ಟಲ್‌ನಲ್ಲಿ ವಿವರಗಳನ್ನು ನಮೂದಿಸುವ ಕುರಿತಂತೆ ವಿವರವಾದ ಸೂಚನೆಗಳನ್ನು ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ನೀಡಲಾಗಿರುತ್ತದೆ. ಟ್ಯಾಬ್ಲೆಟ್ ಪಿ.ಸಿಗಳನ್ನು ಸರಬರಾಜು ಮಾಡಿದ ನಂತರದಲ್ಲಿ ಟ್ಯಾಬ್ಲೆಟ್ ಪಿ.ಸಿಗಳು ಹೆಚ್ಚುವರಿಯಾದಲ್ಲಿ ವಾಪಸ್ಸು ಪಡೆಯಲು/ಕಡಿಮೆಯಾದಲ್ಲಿ ಹೆಚ್ಚುವರಿ ಸರಬರಾಜು ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ ಖಚಿತವಾದ ಮಾಹಿತಿಗಳನ್ನು ಪೋರ್ಟಲ್‌ನಲ್ಲಿ ಒದಗಿಸುವುದು ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ ಎಂಬ ಅಂಶವನ್ನು ಪ್ರಾಂಶುಪಾಲರುಗಳ ಗಮನಕ್ಕೆ ತರಲಾಗಿರುತ್ತದೆ.

ಅನೇಕ ಕಾಲೇಜುಗಳಿಂದ ಸದರಿ ಪೋರ್ಟಲ್‌ನಲ್ಲಿ ನಮೂದಿಸಿರುವ ಮಾಹಿತಿಗಳನ್ನು ಪರಿಷ್ಕರಿಸಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿಕೆಗಳು ಸ್ವೀಕೃತವಾಗಿದ್ದ ಕಾರಣ ನಮೂದಿಸಲಾಗಿರುವ ವಿದ್ಯಾರ್ಥಿಗಳ ವಿವರಗಳನ್ನು ಪರಿಷ್ಕರಿಸಲು Edit ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಅರ್ಹ ವಿದ್ಯಾರ್ಥಿಗಳ ವಿವರಗಳನ್ನು ನಮೂದಿಸಲು ಸಮಯವನ್ನು ದಿನಾಂಕ:10/04/2021ರ ಸಾಯಂಕಾಲ 04:00 ರವರೆಗೆ ವಿಸ್ತರಿಸಲಾಗಿದ್ದು, ಸದರಿ ದಿನಾಂಕದೊಳಗಾಗಿ ಪೋರ್ಟಲ್‌ನಲ್ಲಿ ಅರ್ಹ ವಿದ್ಯಾರ್ಥಿಗಳ ವಿವರಗಳನ್ನು ನಮೂದಿಸುವುದು/ಪರಿಷ್ಕರಿಸುವುದು ಈ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿರತಕ್ಕದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಮುಂದುವರೆದಂತೆ, ಸದರಿ ದಿನಾಂಕದೊಳಗಾಗಿ, ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಗೂಗಲ್ ಫಾರ್ಮನಲ್ಲಿ ವಿವರಗಳನ್ನು ಭರ್ತಿ ಮಾಡಿ ಸಲ್ಲಿಸುವಂತೆ ತಿಳಿಸುತ್ತಾ, ಟ್ಯಾಬ್ಲೆಟ್ ಪಿ.ಸಿ. ಪಡೆಯಲು ಅರ್ಹ ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡ ದೃಢೀಕರಣ-1ರ ನಮೂನೆ ಹಾಗೂ ಅನರ್ಹ ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡ ದೃಢೀಕರಣ-2ರ ನಮೂನೆ ಗಳನ್ನು ಡೌನ್‌ಲೋಡ್ ಮಾಡಿಕೊಂಡು ಕಾಲೇಜಿನ ಲೆಟರ್‌ಹೆಡ್‌ನಲ್ಲಿ

ಸದರಿ ನಮೂನೆಗಳಲ್ಲಿ ವಿವರಗಳನ್ನು ಭರ್ತಿ ಮಾಡಿ, ಪ್ರಾಂಶುಪಾಲರು ಧೃಢೀಕರಿಸಿ, ಪ್ರತಿಯನ್ನು ಗೂಗಲ್ ಫಾರ್ಮ್‌ನಲ್ಲಿ ನೀಡಲಾಗಿರುವ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ– ಮಾಹಿತಿಗಾಗಿ ಮತ್ತು ಕಾಲೇಜುಗಳಿಂದ ಮಾಹಿತಿಗಳನ್ನು ಪೋರ್ಟಲ್‌ನಲ್ಲಿ ದಾಖಲಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ– ಮಾಹಿತಿಗಾಗಿ

College Letter head

Ref. Date:

## ದೃಢೀಕರಣ–1

ಟ್ಯಾಬ್ಲೆಟ್–ಪಿಸಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳು ಕೆಳಕಂಡಂತಿದ್ದು, ಈ ಮಾಹಿತಿಯು ಸರಿಯಾಗಿದೆಯೆಂದು ದೃಢೀಕರಿಸಲಾಗಿದೆ.

| Description | | Numbers |
|---|---|---|
| College ID : | | |
| Total No. of Students admitted for I Year 2020-21 | | |
| Total No. of Students Eligible for Tablet-PC | | |
| Details of Total Eligible Students | SC Boys | |
| | SC Girls | |
| | ST Boys | |
| | ST Girls | |
| | Minority Boys | |
| | Minority Girls | |
| | OBC Boys | |
| | OBC Girls | |
| | GM Boys | |
| | GM Girls | |
| Total No. of Students Not Eligible for Tablet-PC | | |

ಪ್ರಾಂಶುಪಾಲರು ಸಹಿ& ಮೊಹರು
(ಹೆಸರು ಮತ್ತು ಮೊಬೈಲ್ ಸಂಖ್ಯೆ)

College Letter head

Ref. Date:

## ದೃಢೀಕರಣ-2

ಟ್ಯಾಬ್ಲೆಟ್-ಪಿಸಿ ಪಡೆಯಲು ಅನರ್ಹರಾಗಿರುವ ವಿದ್ಯಾರ್ಥಿಗಳ ವಿವರಗಳು ಕೆಳಕಂಡಂತಿದ್ದು, ಈ ಮಾಹಿತಿಯು ಸರಿಯಾಗಿದೆಯೆಂದು ದೃಢೀಕರಿಸಲಾಗಿದೆ.

| ಕ್ರಮ ಸಂಖ್ಯೆ | ವಿದ್ಯಾರ್ಥಿ ಹೆಸರು | ವಿ ವಿ ನೊಂದಣಿ ಸಂಖ್ಯೆ | ತರಗತಿ | ಟ್ಯಾಬ್ಲೆಟ್-ಪಿಸಿ ಪಡೆಯಲು ಅನರ್ಹರಾಗಿರಲು ಕಾರಣಗಳ ವಿವರ |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |

ಪ್ರಾಂಶುಪಾಲರು ಸಹಿ& ಮೊಹರು
(ಹೆಸರು ಮತ್ತು ಮೊಬೈಲ್ ಸಂಖ್ಯೆ)